
ಚಾರಣದ ಹಾದಿಯಲ್ಲಿ...

**ಬಾಹ್ಯಾಕಾಶ ವೀಕ್ಷಣೆ:** ಇಲ್ಲಿನ ಒಂದು ವಿಶೇಷವೆಂದರೆ, ಸ್ವಚ್ಛವಾದ ಆಕಾಶದಲ್ಲಿನ ನಕ್ಷತ್ರಗಳ ನಡುವೆ ದೇಶ ವಿದೇಶಗಳು ಹಾರಿಬಿಟ್ಟಿರುವ ಬಾಹ್ಯಾಕಾಶ ನೌಕೆ (ಸೆಟಲೈಟ್) ಗಳನ್ನು ಗಮನಿಸಬಹುದಾದ್ದು. ವೇಗವಾಗಿ ಒಂದರ ಹಿಂದೆ ಒಂದು, ದಾರಕ್ಕೆ ಪೋಣಿಸಿದ ಬಂಗಾರದ ಕಾಸಿನ ಸರದಂತೆ ಸಾಗುವ ಈ ನೌಕೆಗಳು ಪ್ರತೀ ಎರಡು ಗಂಟೆಗಳಿಗೊಮ್ಮೆ ಕಾಣಸಿಗುತ್ತವೆ. ಆದರೆ, ಆ ನಟ್ಟನಡು ರಾತ್ರಿ ಚಳಿಗಾಳಿಯ ನಡುವೆ ಇದನ್ನು ನೋಡುವುದು ಕೂಡ ಒಂದು ರೀತಿ ಸಾಹಸವೇ.

## ದಟ್ಟ ಹಿಮಾವೃತ ರೋಲಿ ಖೋಲಿ

ಮೂರನೇ ದಿನ ಆರಂಭವಾಗುವುದೇ ರೋಲಿ ಖೋಲಿ ಚಾರಣದಿಂದ. ಲಾಮಾ ಡೋ ಬೇಸ್ ಕ್ಯಾಂಪ್ ಎದುರು ಕಾಣುವ ಪರ್ವತಾರೋಹಣ ನಿಜಕ್ಕೂ ಕಠಿಣಾತಿ ಕಠಿಣ. ಕೆಳಗೆ ನಿಂತು ನೋಡಿದರೆ, ಪರ್ವತ ಧುತ್ತೆಂದು ಎದೆಯ ಮೇಲೇ ಬಿದ್ದ ಅನುಭವ. ಅತ್ಯಂತ ದುರ್ಗಮ ಏರು. ಕಡಿದಾದ ದಾರಿಯಲ್ಲದ ದಾರಿ, ಆಗಾಗ ಜಾರಿ ಬೀಳುವ ಕಲ್ಲುಗಳ ನಡುವೆ ಸಾಗುವುದು ಹರಸಾಹಸ. ಈ ಕಠಿಣ ಮಾರ್ಗವನ್ನು ಕೂಡ ಸುಗಮಗೊಳಿಸುವುದು ಇಲ್ಲಿನ ಪ್ರಾಕೃತಿಕ ವಿಸ್ಮಯಗಳು. ಕ್ಷಣಕ್ಷಣಕ್ಕೂ ಬದಲಾಗುವ ವಾತಾವರಣ. ಒಂದು ಕ್ಷಣ ಇಡೀ ಪ್ರದೇಶವನ್ನು ಮಂಜು ಆವರಿಸಿದರೆ, ಮತ್ತೊಂದು ಕ್ಷಣದಲ್ಲಿ ಸ್ಪಷ್ಟ ನೀಲಾಕಾಶ, ಮಗದೊಮ್ಮೆ ದಟ್ಟವಾದ ಮೋಡ ಕವಿದು, ಆಗಾಗ ಸುರಿಯುವ ಹಿಮಪಾತ... ಈ ಎಲ್ಲಾ ವಿಸ್ಮಯಗಳನ್ನು ಅನುಭವಿಸುತ್ತಲೇ ಪರ್ವತವನ್ನು ಏರುವುದು ರೋಮಾಂಚನಕಾರಿ ಅನುಭವ.

ಸುಮಾರು 13 ಸಾವಿರ ಅಡಿ ಎತ್ತರ ತಲುಪುತ್ತಿದ್ದಂತೆ ವಿಶಾಲವಾದ ಹಿಮಲೋಕ ಪ್ರವೇಶಿಸಿದಂತೆ. ಕಣ್ಣು ಹಾಯಿಸಿದಷ್ಟೂ ದೂರ ಇಡೀ ಪರ್ವತ ಶ್ರೇಣಿಯನ್ನು ಆವರಿಸಿಕೊಂಡಿರುವ ಹಿಮ. ಹಿಮದ ನಡುವೆಯೇ ಹಾಕಿರುವ ಟೆಂಟ್‌ನಲ್ಲಿ ತಂಗುವುದು ಚಾರಣಿಗರಿಗೆ ಹೊಸ ಅನುಭವ. ಬೆಳಿಗ್ಗೆ ಸೂರ್ಯೋದಯದ ವೇಳೆಯಲ್ಲಿ ಕ್ಷಣಕ್ಷಣಕ್ಕೂ ಹಿಮಾವೃತ ಪರ್ವತಗಳ ಬಣ್ಣಗಳು ಕೂಡ ಬದಲಾಗುತ್ತಾ ರೋಮಾಂಚನಗೊಳಿಸುತ್ತವೆ. ಈ ರೋಲಿ ಖೋಲಿಯ ಕ್ಯಾಂಪ್ ಹಿಂದೆಯೇ ಇರುವ 1000 ಅಡಿ ಎತ್ತರದಲ್ಲಿ ಪರ್ವತವನ್ನು ಏರಿದರೆ, ಮತ್ತೊಂದು ಹಿಮಲೋಕ ತೆರೆದುಕೊಳ್ಳುತ್ತದೆ.

ಅನತಿ ದೂರದಲ್ಲಿ ಇಂದ್ರ ಪರ್ವತ, ಹನುಮಾನ್ ಟಿಬ್ಬಾ, ಅಲ್ಲಿಂದಾಚೆ ಕೈಲಾಸ ಪರ್ವತವನ್ನು ಸಹ ಗಮನಿಸಬಹುದು. ಹಾಗೆಯೇ ಪೀರ್ ಪಂಜಾಲ್ ಮತ್ತು ಧೌಲಾಧರ್, ಡಿಯೋ ಟಿಬ್ಬಾ ಪರ್ವತ ಶ್ರೇಣಿಗಳನ್ನೂ ಗಮನಿಸಬಹುದು. ಅಲ್ಲಿಗೆ ಸುಮಾರು 14 ಸಾವಿರ ಅಡಿ ಎತ್ತರದ ಶಿಖರವನ್ನು ಏರಿದ ತೃಪ್ತಿ.

ಸಮುದ್ರಮಟ್ಟದಿಂದ ಬರೋಬ್ಬರಿ 14000 ಅಡಿ ಎತ್ತರ ಈ ರೋಲಿ ಖೋಲಿ, ನಿರಂತರವಾಗಿ ಸುರಿಯುವ ಹಿಮಪಾತಕ್ಕೆ, ವಿಶಾಲವಾಗಿ ಹರಡಿರುವ ಹುಲ್ಲುಗಾವಲಿಗೆ ಹೆಸರುವಾಸಿಯಾದ ಜಾಗ. ಒಂದು ಕಾಲದಲ್ಲಿ ಈ ಪ್ರದೇಶದಲ್ಲಿನ ವಿಶಾಲ ಹುಲ್ಲುಗಾವಲು ಹಾಗೂ ಭೃಗು ಸರೋವರದ ಬಳಿ ಆಹಾರ, ನೀರಿಗಾಗಿ ಬರುವ ಪ್ರಾಣಿಗಳ ಬೇಟೆ ನಡೆಯುತ್ತಿತ್ತು ಎನ್ನಲಾಗಿದೆ.

ರೋಲಿ ಖೋಲಿಯ ಆ ಟೆಂಟ್‌ಗಳಲ್ಲಿ ಒಂದು ದಿನ ಕಳೆದ ನಂತರ ಇಳಿಯುವ ಸಾಹಸ ಪ್ರಾರಂಭ. ತೀರಾ ಕಡಿದಾದ ಇಳಿಜಾರು. ರೋಲಿ ಖೋಲಿಯಿಂದ ಮೊದಲ ಇಳಿಜಾರು ಕ್ಯಾಂಪ್ ಸರೋಟು. ಇದು ಸುಮಾರು 9,300 ಅಡಿ ಎತ್ತರದಲ್ಲಿದೆ. ಅಲ್ಲಿ ತಂಗಿ ಬೆಳಿಗ್ಗೆ ಮತ್ತೆ ಇಳಿಯಲು ಆರಂಭಿಸಿದರೆ, ಸಿಗುವುದೇ ಜೋಬ್ರಿ ನಾಲಾ. ಇದು ಚಾರಣದ ಅಂತಿಮ ಚರಣ.

ಅಂದಹಾಗೆ ಇಳಿಯುವುದು ಸುಲಭವೇನಲ್ಲ. ಏರಿದ ನಂತರ ಇಳಿಯಲೇಬೇಕಲ್ಲ. ಇದು ಬದುಕಿನ ಪಾಠ ಕೂಡ. ಆದರೆ, ಈ ಇಳಿಯುವ ಸಮಯದಲ್ಲಿ ಸಿಗುವ ಪಕ್ಷಿ ಸಂಕುಲ, ಹಚ್ಚ ಹಸಿರಿನ ವಾತಾವರಣ, ದೂರದಲ್ಲಿ ಕಾಣುವ ಹುಲ್ಲುಗಾವಲು, ಅಲ್ಲಿಯ ವಿಶೇಷ ಕುರಿ ಸಂಕುಲಗಳು, ಹೆಜ್ಜೆ ಮೇಲೆ ಹೆಜ್ಜೆ ಇಡುತ್ತಾ, ಇಳಿದು ಬಂದ ತಕ್ಷಣ ಕೊನೆಯಲ್ಲಿ ಟೀ ಅಂಗಡಿ ಸಿಗುತ್ತದೆ. ಅಲ್ಲಿ ದಣಿವಾರಿಸಿಕೊಂಡು, ನಂತರ ನೇರವಾಗಿ ವಾಹನದ ಮೂಲಕ ಸಿಯೋ ಭಾಗ್ ಬೇಸ್‌ಕ್ಯಾಂಪ್‌ಗೆ ತಲುಪಿದರೆ, ರೋಲಿ ಖೋಲಿ ಚಾರಣ ಯಶಸ್ವಿಯಾದಂತೆಯೇ.

ಐದು ದಿನಗಳ ರೋಲಿ ಖೋಲಿ ಚಾರಣ, ಹತ್ತು ಹಲವು ನೆನಪಿನ ಬುತ್ತಿಗಳನ್ನು ಕಟ್ಟಿಕೊಡುತ್ತದೆ. ಪರ್ವತಾರೋಹಣ, ನಮ್ಮ ಅಹಂಕಾರವನ್ನು ಮುರಿದು, ಪ್ರಕೃತಿಗಿಂತ ನೀನು ದೊಡ್ಡವನಲ್ಲ ಎಂಬ ಎಚ್ಚರಿಕೆಯನ್ನೂ ನೀಡುತ್ತದೆ. ಮುಂದಿನ ಚಾರಣದವರೆಗೆ ಇಡೀ ಬದುಕನ್ನು ಆ ಸವಿ ನೆನಪುಗಳೊಂದಿಗೆ ಚೇತೋಹಾರಿಯಾಗಿರಿಸುತ್ತದೆ. ಈ ನಿಟ್ಟಿನಲ್ಲಿ ರೋಲಿ ಖೋಲಿ ಒಂದು ರೋಮಾಂಚನಕಾರಿ ಅನುಭವ.



**ಭೃಗು ಸರೋವರ:** ಈ ರೋಲಿ ಖೋಲಿ ಭೃಗು ಸರೋವರದ ತಳದಲ್ಲಿರುವ ಒಂದು ಸುಂದರವಾದ ಜಾನುವಾರು ಮೇಯಿಸುವ ಸ್ಥಳ. ಒಂದು ಕಡೆ ಮನಾಲಿಯಿಂದ ಆರಂಭವಾಗುವ ಭೃಗು ಸರೋವರದ ಚಾರಣ, ಗುಲಾಬಾ ಗ್ರಾಮ ಮತ್ತು ಬೇಸ್ ಕ್ಯಾಂಪ್, ರೋಲಿ ಖೋಲಿಯ ಮೂಲಕ ಅಂತಿಮವಾಗಿ ಭೃಗು ಸರೋವರಕ್ಕೆ ತಂದು ನಿಲ್ಲಿಸುತ್ತದೆ. ಬಿಸಿನೀರಿನ ಬುಗ್ಗೆಗಳನ್ನು ಆನಂದಿಸಲು ಬಯಸಿದರೆ, ಕೆಳಗೆ ಹೋಗುವಾಗ ವಾಸಿಷ್ಠವನ್ನು ಕೂಡ ಪ್ರವಾಸದಲ್ಲಿ ಸೇರಿಸಿಕೊಳ್ಳಬಹುದು. ಅದೃಷ್ಟವಿದ್ದರೆ, ಪಕ್ಷಿ ಮತ್ತು ವನ್ಯಜೀವಿ ವೀಕ್ಷಣೆಗೆ ಅವಕಾಶವಿದೆ.